ಬದಲಾವೆ ಮಾಡಿಕೊಳ್ಳಲಾಗುವುದಿಲ್ಲ' ಎನ್ನುವ ಕೋರ್ಟ್ ಆರ್ಡರ್ ಆದನಂತರ, ಇವೊತ್ತು ಆ ರೈತರುಗಳಿಗೆ ಯಾವುದೇ ಆಧಾರವಿಲ್ಲ. ಆ ಜಮೀನಿನಲ್ಲಿ ಸುಮಾರು ಸಾವಿರಾರು ಕುಟುಂಬಗಳು 40 ವರ್ಷಗಳಿಂದ ಉಳುಮೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇನಾಮದಾರರಿಗೆ ಕೆಲವರು ಇವೊತ್ತಿಗೂ ಕೊಡುತ್ತಿದ್ದಾರೆ. ಒಂದು ಎಕರೆಗೆ 100-200 ಎಂದು ಮೊದಲಿತ್ತು, ಇವೊತ್ತು ಎಕರೆಗೆ 500 ಕೊಡಬೇಕೆಂದು ಹೇಳುತ್ತಿದ್ದಾರೆ. ಎಷ್ಟು ದಿವಸಗಳ ಇದೇ ರೀತಿ ಕೊಡಬೇಕು? ಎಂಬ ಚಿಂತೆಯಲ್ಲಿದ್ದಾರೆ. ಈ ಬಗ್ಗೆ ನಾನು ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಿದ ನಂತರ, 'ಆ ಜಮೀನು ರೈತರಿಗೆ ಸಿಗುವಂಥ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ' ಎಂದು ಸರ್ಕಾರ ಉತ್ತರ ಕೊಟ್ಟಿತು. ಆದರೆ, ಇಲ್ಲಿಯವರೆವಿಗೂ ಸರ್ಕಾರ ಪ್ರಯತ್ನ ಮಾಡಿಲ್ಲ. ಈಗ ಇನಾಮದಾರರು ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನನ್ನ ಪ್ರಶ್ನೆಯೇನೆಂದರೆ, ಆ ಜಮೀನಿನಲ್ಲಿ ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರ ಒಂದು ಪಟ್ಟಿಯನ್ನಾದರೂ ಮಾಡಿ ನಮಗೆ ಒದಗಿಸುತ್ತೀರಾ, ಹೇಗೆ?

ಲ್ಯಾಂಡ್ ರಿಫಾರ್ಮ್ ಆಕ್ಟ್ ಕೆಳಗೆ ಉಳುವವನೇ ಭೂಮಿಯ 'ಒಡೆಯ' ಎನ್ನುವುದು ನಮ್ಮ ಭಗವದ್ಗೀತೆ ಎಂದು ಹೇಳುತ್ತೀರಿ, ಆದರೆ ಅಲ್ಲಿ 40 ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬಂದಿರತಕ್ಕವರನ್ನು ಗುಳಿಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ಬದುಕಲು ಯಾವ ರೀತಿಯಲ್ಲಿ ರಕ್ಷಣೆಯನ್ನು ಕೊಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್:- ಕಿತ್ತೂರು ರಾಣಿ ಚೆನ್ನಮ್ಮನ ಬಲಗೈ ಭಂಟನಾಗಿದ್ದ ಸಂಗೊಳ್ಳಿ ರಾಯಣ್ಣನನ್ನು ಇಂಗ್ಲೀಷ್‌ನವರಿಗೆ ಹಿಡಿದುಕೊಟ್ಟಂಥ ವಂಶಸ್ಥರಿಗೆ ಆ ಸಂದರ್ಭದಲ್ಲಿ ಜಮೀನನ್ನು ಇನಾಮ್ತಿಯಾಗಿ ಕೊಟ್ಟಿದ್ದರು. ಆ ಇನಾಮ್ತಿದಾರರುಗಳು ಅವರದೇ ಆದಂಥ ವ್ಯವಸ್ಥೆಯನ್ನು ಮಾಡಿಕೊಂಡು ಅಲ್ಲಿ ಉಳುಮೆಮಾಡತಕ್ಕ ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಇನ್ನೂ ಸಹ ಅವರ ಇನಾಮ್ತಿ, ಪಾಳ್ಳೇಗಾರಿಕೆ, ಆ ಕಿತ್ತೂರು ರಾಣಿ ಪ್ರಾಂತ್ಯದಲ್ಲಿ ಹೋಗಿಲ್ಲ. ಆದ್ದರಿಂದ ಅದರ ಬಗ್ಗೆ ವೈಯಕ್ತಿಕವಾದ ಮಾಹಿತಿಯನ್ನು ತರಿಸಿಕೊಂಡು ನೋಡಬೇಕು. ಮತ್ತು ದಯಮಾಡಿ ತಾವು ಒಮ್ಮೆ ಕಿತ್ತೂರು ಚೆನ್ನಮ್ಮನ ಸ್ಥಳಕ್ಕೆ ಬಂದು ಅಲ್ಲಿನ ಪರಿಸ್ಥಿತಿಯನ್ನು ಅಧಿಕಾರಿಗಳು ಮತ್ತು ಮುಖಂಡರನ್ನು ಕರೆದು ನೋಡಬೇಕು. ಈ ರೀತಿ ರೈತರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಾಬಾಗೌಡ ಪಾಟೀಲ್:- ತಾವು ಕೊನೆಯ ಪಕ್ಷ ಡೆಪ್ಯೂಟಿ ಕಮಿಷನರ್‌ರವರಿಂದ ಈ ರೀತಿ ಯಾರ್ಯಾರು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ ಅದರ ಬಗ್ಗೆ ಒಂದು ಪಟ್ಟಿಯನ್ನು ಮಾಡಿ ನಮಗೆ ಕೊಟ್ಟರೆ ಸಾಕು.

ಶ್ರೀ ಎಂ. ರಾಜಶೇಖರ ಮೂರ್ತಿ:- ಇದರ ಬಗ್ಗೆ ವರದಿಯನ್ನು ತರಿಸಿ ಏನು ಕ್ರಮ ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀ ಬಾಬಾಗೌಡ ಪಾಟೀಲ್:- ಅಲ್ಲಿ ಸಾವಿರಾರು ಕುಟುಂಬಗಳು ಇವೆ, ಎಂದು ಮಾಡಿ ಮುಗಿಸುತ್ತೀರಿ? ಪೋಲೀಸ್‌ನವರು ಇನಾಮ್‌ದಾರರ ಮಾತನ್ನು ಕೇಳಿ ದುಡ್ಡು ಕೊಡಲಿಲ್ಲವೆಂದು ಗುಳ್ಳಿಬ್ಬಿಸಿ ಬಿಡುತ್ತಾರೆ. ಆ ಕಾರಣ ಸ್ವಲ್ಪ list ಮಾಡಿಸಿದರೆ ಚೆನ್ನಾಗಿರುತ್ತದೆ.

Sri. M. Rajashekhara Murthy:- Status quo ಮೈಂಟೇನ್ ಮಾಡಿ disturb ಮಾಡಬೇಡಿ ಎಂದು ಹೇಳುತ್ತೇನೆ.

ವಿಷಯ(3) ಅಫ್ಜಲ್‌ಪುರ ಮತ ಕ್ಷೇತ್ರದಲ್ಲಿ ಕಗ್ಗೊಲೆಗಳ ಪ್ರಸ್ತಾಪ

ಶ್ರೀ ಆರ್.ವಿ. ದೇಶಪಾಂಡೆ:- ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿಬೇಕೆಂದು ನಾನು ತಮ್ಮ ಅನುಮತಿಯನ್ನು ಪಡೆದುಕೊಂಡಿದ್ದೆ. ಅದೇನೆಂದರೆ, ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ಮತದಾರರ

ಕ್ಷೇತ್ರದಲ್ಲಿ ಇವತ್ತು ಹಿಟ್ಲರ್ ಶೈಲಿಯಲ್ಲಿ ಘಟನೆಗಳು ನಡೆಯುತ್ತಿವೆ. ಹಿಟ್ಲರ್ ಶೈಲಿಯಲ್ಲಿ ದಬ್ಬಾಳಿಕೆ ನಡೆಯುತ್ತಿದೆ. ಕಳೆದ 7-8 ತಿಂಗಳಲ್ಲಿ ಅಲ್ಲಿ 40ಕ್ಕೂ ಹೆಚ್ಚು ಕೊಲೆ ಆಗಿದೆ. ಪರಿಶಿಷ್ಟ ಜನಾಂಗದವರ, ಹಿಂದುಳಿದ ವರ್ಗದವರ, ರಾಜಕೀಯ ವ್ಯಕ್ತಿಗಳ ಕೊಲೆ ಆಗಿದೆ. ಪ್ರತಿಯೊಂದು ಕೊಲೆಯ ಕೇಸ್‌ನಲ್ಲೂ ಒಬ್ಬ ಆರೋಪಿಯೂ ಸಿಕ್ಕಿಲ್ಲ! ಸಿಕ್ಕಿದ್ದರೂ ಸಹ ಸಣ್ಣ ಸಣ್ಣ ಫೈಲನ್ನು ಹಾಜರು ಮಾಡಿ ಅವರನ್ನು ಒಪ್ಪಿಸಿ ಮನೆಗೆ ಕಳುಹಿಸುತ್ತಾರೆಯೇ ವಿನಹ ನಿಜವಾಗಿ ನೋಡಿದರೆ ಸರ್ಕಾರದಿಂದ ಯಾವ ಕ್ರಮವೂ ನಡೆಯುತ್ತಿಲ್ಲ. ಸರ್ಕಾರ ಇವತ್ತು ಅಲ್ಲಿಯ ತಮ್ಮ ಪಕ್ಷದ ಸ್ಥಳೀಯ ರಾಜಕೀಯ ನಾಯಕರು ಯಾರು ಇದ್ದಾರೆ, ಅವರಿಗೆ ಸಂರಕ್ಷಣೆಯನ್ನು ಕೊಡುತ್ತಿದ್ದಾರೆ. ನಾನು ಅದರ ಬಗ್ಗೆ ಉದಾಹರಣೆಯನ್ನು ಕೊಡುತ್ತೇನೆ. 1990ನೇ ಇಸವಿಯಲ್ಲಿ ಸಿದ್ದಪ್ಪಬೋರ್ಗಿ ಎನ್ನುವವರ ಕೊಲೆ ಆಯಿತು. ಏಕೆ ಕೊಲೆ ಆಯಿತು ಎಂದರೆ: 1989ರಲ್ಲಿ ನಮ್ಮ ಪಕ್ಷದಿಂದ ಜಿಲ್ಲಾಪರಿಷತ್ತಿಗೆ ಗೌಡಪ್ಪ ಎಂಬುವವರು ಆಯ್ಕೆಯಾಗಿ ಬಂದಿದ್ದರು, ಅವರು 1989ರಲ್ಲಿ ವಿಧಾನ ಸಭೆಗೆ ಅಭ್ಯರ್ಥಿಯಾಗಿದ್ದರು, ಆನಂತರ ಅವರು ಎಸ್.ಜೆ.ಪಿ. ಪಕ್ಷಕ್ಕೆ ಹೋದರು. ಇವರಿಗೆ ಸಿದ್ದಪ್ಪ ಬೋರ್ಗಿಯವರು ಬೆಂಬಲ ಮಾಡಿದರು ಎಂದು ಅವರನ್ನು ಕೊಲೆ ಮಾಡಿದರು. ಅದಾದನಂತರ ಅದೇ 1990ನೇ ಇಸವಿಯಲ್ಲಿ ಕಡಗಳ್ಳಿಸ್ವಾಮಿ ಎಂಬ ಜಿಲ್ಲಾಪರಿಷತ್‌ನ ಸದಸ್ಯರ ಕೊಲೆ ಆಯಿತು. ನಂತರ 1-6-1991ರಲ್ಲಿ ಗೌಡಪ್ಪ ಪಾಟೀಲ್ ಎಂಬುವವರ ಕೊಲೆ ಸಹ ಆಯಿತು. ಅಂದರೆ ಚುನಾವಣೆಯಾದ ಮೇಲೆ ಅಭ್ಯರ್ಥಿಯ ಬೆಂಬಲಿಗ ಸಾಯುತ್ತಾನೆ, 1990ನೇ ಇಸವಿಯಲ್ಲಿ ಜಿಲ್ಲಾಪರಿಷತ್‌ನ ಸದಸ್ಯ ಸಾಯುತ್ತಾನೆ ಅನಂತರ 1-6-91ರಲ್ಲಿ ವಿಧಾನ ಸಭೆಗೆ ಅಭ್ಯರ್ಥಿಯಾಗಿದ್ದ ವ್ಯಕ್ತಿಯು ಸಾಯುತ್ತಾನೆ. ಬಸವರಾಜ್ ಮಾಸ್ಟರ್, ಪಂಡಿತ್ ಯುವರಾಜ್ ಮತ್ತು ಚಂದ್ರಕಾಂತ್ ಈ ನಾಲ್ಕು ಜನ ಈ ನಮ್ಮ ಗೌಡಪ್ಪ ಪಾಟೀಲ್ ಮರ್ಡರ್ ಕೇಸ್‌ನಲ್ಲಿ ಇನ್‌ವಾಲ್ವ್ ಇದ್ದರು. ಆದರೆ ಪೋಲೀಸರಿಗೆ ಅವರನ್ನು ಅರೆಸ್ಟ್ ಮಾಡುವುದಕ್ಕೆ ಧೈರ್ಯ ಇರಲಿಲ್ಲ. ಈ ನಾಲ್ಕು ಜನರ ದಬ್ಬಾಳಿಕೆ. ಈ ನಾಲ್ಕು ಜನ ಏನು ಹೇಳುತ್ತಾರೆ, ಆ ಪ್ರಕಾರ ನಡೆಯಬೇಕು. ಸ್ಥಳೀಯ ನಿಮ್ಮ ಪಕ್ಷದ ಮುಖಂಡರ ಎಡಗೈ ಬಲಗೈ ಅವರು. ತಹಶೀಲ್ದಾರ್ ಹೆದರುತ್ತಾರೆ. ಪಿ.ಎಸ್.ಐ. ಹೆದರುತ್ತಾರೆ. ಆದರೆ ಒಂದು ದಿನ ಮುಂಜಾನೆ ಜನ ಬೇಸ್ತು ಬಿದ್ದರು. ಕಾರಣ, ಮುಂಜಾನೆ ಈ ನಾಲ್ಕು ಜನರ ಮರ್ಡರ್ ಆಯಿತು. ಎಲ್ಲಿ ಆಯಿತು ಅಲ್ಲಿ ಪೋಲೀಸ್ ಸ್ಟೇಷನ್ ಸಮೀಪ. ಬಸ್ ಸ್ಟ್ಯಾಂಡ್ ಸಮೀಪ. ಮತ್ತು ಅಲ್ಲಿ ಒಂದು ನರ್ತಕಿ ಬಾರ್ ಎಂದು ಇದೆ, ಅಲ್ಲಿ ಸಮೀಪ ಈ ನಾಲ್ಕು ಜನರ ಮರ್ಡರ್ ಆಯಿತು. ಇಲ್ಲಿಯವರೆಗೂ ತನಿಖೆ ಏನೂ ಆಗಿಲ್ಲ. ಇನ್ನು ಯಾರನ್ನೂ ಹಿಡಿದಿಲ್ಲ. ನಾಲ್ಕು ಜನ ಯಾರೇ ಇರಲಿ, ಮರ್ಡರ್ ಆದನಂತರ ಅವರ ಬಗ್ಗೆ ತನಿಖೆಯಾಗಬೇಕು. ಹಿಡಿಯಬೇಕು. ಅದರ ಬಗ್ಗೆಯೂ ಏನೂ ಇಲ್ಲ. ಅದರ ನಂತರ ನಮ್ಮ ಈ ದೇವಲಗಾಣಗಾಪುರದಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ಎರಡು ಜನರನ್ನು ಕಮ್ಯುನಲ್ ರೈಟ್ಸ್‌ನಲ್ಲಿ ಹೊಡೆದರು. ಸ್ಟ್ಯಾಬಿಂಗ್ ಆಯಿತು. ಅದರ ನಂತರ 92ನೇ ಇಸವಿಯಲ್ಲಿ ಅಳಗಿಯಲ್ಲಿ ಮೂರು ಜನ ಹರಿಜನರ ಕೊಲೆಯಾಯಿತು. ಹೀಗೆ ಇನ್ನು ಎಷ್ಟು ಕೊಲೆಯಾಗಬೇಕು ಸ್ವಾಮಿ. ಇದೇ ಕಾನ್‌ಸ್ಟಿಟ್ಯೂಯೆನ್ಸೀಸ್‌ನಲ್ಲಿ ಮರ್ಡರ್ ಏತಕ್ಕೆ ಆಗುತ್ತಿವೆ? ಇದಕ್ಕೆ ಯಾರು ಜವಾಬ್ದಾರಿ ಇದ್ದಾರೆ? ಇವತ್ತು ಅಲ್ಲಿ ಏನು ಗೂಂಡಾ ಜನ ಇದ್ದಾರೆ, ಅವರಿಗೆ ಮೇಲಿನವರ ಸಂರಕ್ಷಣೆ ಇದೆ, ಅಧಿಕಾರಿಗಳ ಸಂರಕ್ಷಣೆ ಇದೆ. ಸಿ.ಓ.ಡಿ. ಎನ್‌ಕ್ವೈರಿ ಮಾಡುತ್ತೇನೆ ಎಂದರೆ ನನಗೆ ಸಮಾಧಾನ ಇಲ್ಲ. ನೀವು ಹೇಳಬಹುದು, ನಾಲ್ಕು ಜನ ಮರ್ಡರ್ ಫೆಬ್ರುವರಿ 93ನೇ ಇಸವಿಯಲ್ಲಿ ಏನು ಆಗಿದೆ? ನನಗೆ ಅದರ ಅವಶ್ಯಕತೆ ಇಲ್ಲ. ನನಗೆ ಒಂದು ಕಾಂಪ್ರೆಹೆನ್ಸೀವ್ ಆಗಿ ತನಿಖೆ ಬೇಕಾಗಿದೆ. ಕಳೆದ ಆರೇಳು ವರ್ಷದಲ್ಲಿ ಹರಿಜನರ ಬಡಜನರ ಮರ್ಡರ್ ಏನು ಆಗಿದ್ದಾವೆ, ಇವರು ಇಲ್ಲಿ ಏನು ಹೇಳುತ್ತಾರೆ, ಆ ಪ್ರಕಾರ ನಡೆಯಬೇಕು ಹಿಟ್ಲರ್‌ಶಾಹಿ, ಆದರೆ ಪ್ರಜಾಪ್ರಭುತ್ವ ಡೆಮಾಕ್ರಸಿ ಏನೂ ಇಲ್ಲ. ಹಾಗಾಗಿ ಇವತ್ತು ಹರಿಜನರ ಕೊಲೆಯಾದರೂ ಸರ್ಕಾರದಿಂದ ಯಾವ ಕ್ರಮ ಇಲ್ಲ. ಯಾರನ್ನೂ ಅರೆಸ್ಟ್ ಮಾಡುವುದಿಲ್ಲ. ಕಳೆದ ಆರೇಳು ವರ್ಷಗಳಿಂದ 25-30 ಮರ್ಡರ್ ಆಗಿವೆ. ಅದರ ಬಗ್ಗೆ ಒಂದು ಸಮಗ್ರವಾದ ತನಿಖೆಯನ್ನು ತಾವು ಮಾಡಿಸಬೇಕಾಗುತ್ತದೆ. ಇಲ್ಲದಿದ್ದರೆ ತಾವು ಈ ಜನರಿಗೆ ಸಂರಕ್ಷಣೆಯನ್ನು ಕೊಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಛಾರ್ಜ್ ಮಾಡಬೇಕಾಗುತ್ತದೆ. ಈ ಸರ್ಕಾರಕ್ಕೆ ನಿಜವಾಗಿ ಈ

ಹರಿಜನರಾಗಲಿ, ಗಿರಿಜನರಾಗಲಿ ಆ ಕ್ಯಾಂಡಿಡೇಟ್ಸ್ ಮರ್ಡರ್ ಆಗಿದೆ, ಅದರ ಬಗ್ಗೆ ನ್ಯಾಯ ಕೊಡುತ್ತೇವೆ ಎನ್ನುವ ಒಂದು ಭಾವನೆ ಇದ್ದರೆ ಇವತ್ತು ಒಂದು ಸಮಗ್ರವಾದ ಸಿ.ಓ.ಡಿ. ತನಿಖೆಗೆ ತಾವು ಆರ್ಡರ್ ಮಾಡಬೇಕೆಂದು ಈ ಸಮಯದಲ್ಲಿ ಕೇಳುತ್ತೇನೆ. ಅಷ್ಟೇ ಅಲ್ಲ, ಹೆಣ್ಣುಮಕ್ಕಳಿಗೆ ರಸ್ತೆಯಲ್ಲಿ ತಿರುಗಾಡುವುದಕ್ಕೆ ಧೈರ್ಯ ಇಲ್ಲ. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವಾಗಿದೆ. ಪೋಲೀಸ್‌ನವರು ಕಂಪ್ಲೇಂಟ್ ರಿಜಿಸ್ಟರ್ ಮಾಡಿಕೊಳ್ಳುವುದಿಲ್ಲ. ಈ ಪ್ರಕಾರವ ಒಂದು ಹಿಟ್ಲರ್‌ಶಾಹಿ ದರ್ಬಾರ್ ನಡೆಯುತ್ತಿದ್ದಾಗ ತಮ್ಮ ಸರ್ಕಾರ ಮೂಕಪ್ರೇಕ್ಷಕರಾಗಿ ಕುಳಿತಿದೆ, ನಿಮಗೆ ಕಿವಿ ಇಲ್ಲ, ಕಣ್ಣು ಇಲ್ಲ, ಈ ಪ್ರಕಾರ ಕುಳಿತಿದ್ದೀರಿ. ನಿಮಗೆ ಏನಾಗಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ನಿಮಗೇನು ಇಂಟೆಲಿಜೆನ್ಸ್‌ನವರು ರಿಪೋರ್ಟ್ ಕಳುಹಿಸುವುದಿಲ್ಲವೆ? ಪೋಲೀಸ್‌ನವರು ರಿಪೋರ್ಟ್ ಕಳುಹಿಸುವುದಿಲ್ಲವೇ? ನನಗೆ ಗೊತ್ತಾಗುವುದಿಲ್ಲ. ಇಲ್ಲದಿದ್ದರೆ ಹೇಳಿ. ನಿಮ್ಮ ಇಡೀ ಪೋಲೀಸ್ ಇಲಾಖೆ ಇವತ್ತು ವಿಫಲವಾಗಿದೆ ಎಂದು ಹೇಳಿ. ಅಥವಾ ಅಫ್ಜಲ್‌ಪುರದಲ್ಲಿ ಇವತ್ತು ಪೋಲೀಸ್ ಇಲಾಖೆ ಇಲ್ಲ ಎಂದು ಹೇಳಿ. ಪೋಲೀಸ್ ಇಲಾಖೆ ಇಲ್ಲದೆ ನಾವು ರಾಜ್ಯಭಾರ ಮಾಡುತ್ತಿದ್ದೇವೆ ಎಂದು ಹೇಳಿ. ಒಂದು ಸಮಗ್ರವಾದ ತನಿಖೆ ಇದರೊಳಗೆ ಆಗಬೇಕಾಗುತ್ತದೆ. ಒಂದು ಸಂತೋಷದ ಸಂಗತಿ, ನಮ್ಮ ಸಿಂಧಗಿ ತಾಲ್ಲೂಕಿನಲ್ಲಿ ನಿಮ್ಮ ಅಧಿಕಾರಿಗಳು ಅಲ್ಲಿ ಏನು ಎಕ್ಸೈಟ್ ಕಂಟ್ರಾಕ್ಟರ್ ಇದ್ದಾರೆ ಅವರು ಸ್ಯಾಚೆಟ್‌ನಲ್ಲಿ ಸಾರಾಯಿಯನ್ನು ಮಾರಾಟ ಮಾಡುತ್ತಿದ್ದರು, ಇವತ್ತು ಆ ಟ್ರಕ್ ಹಿಡಿದಿದ್ದಾರೆ. ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಆದರೂ ಇವತ್ತು ಅವರಿಗೆ ವಾರ್ನಿಂಗ್ ಹೋಗಿದೆ? ಮುಂದಿನ ಕ್ರಮ ತೆಗೆದುಕೊಂಡರೆ ನಿನ್ನ ಮನೆಗೆ ಕಳುಹಿಸುತ್ತೇನೆ ಎಂದು. ಈ ಅಧಿಕಾರಿ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಂಡಿದ್ದಾನೆ, ನಾನು ಮೆಚ್ಚುತ್ತೇನೆ. ಸಿಂಧಗಿ ತಾಲ್ಲೂಕಿನಲ್ಲಿ ಅಲಮೇಲು ಸ್ಪೇಷನ್ನಿನ ಆ ಪಿ.ಎಸ್.ಐ.ಗೆ ರಕ್ಷಣೆ ಇಲ್ಲ. ನೀನು ಮುಂದಿನ ಕ್ರಮ ತೆಗೆದುಕೊಂಡರೆ ನಿನ್ನನ್ನು ಮನೆಗೆ ಕಳುಹಿಸುತ್ತೇನೆ ಎಂದವೆ ಹೆದರಿಸುತ್ತಿದ್ದಾರೆ ಈ ರೀತಿಯ ವಾತಾವರಣ ಸುತ್ತಮುತ್ತಲೂ ಇವತ್ತು ನಿರ್ಮಾಣವಾಗಿದೆ. ಇದು ಸರ್ಕಾರದಿಂದ ಸಮಗ್ರವಾಗಿ ತನಿಖೆಯಾಗಬೇಕಾಗಿದೆ ಯಾರೇ ಇರಲಿ, ಯಾರು ತಪ್ಪಿತಸ್ಥ ಇರುತ್ತಾರೆ, ಯಾರು ಅನ್ಯಾಯ ಮಾಡಿದ್ದಾರೆ ಅವರ ಮೇಲೆಯೂ ಸಹ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಸಮಗ್ರವಾದ ಒಂದು ಸಿ.ಓ.ಡಿ. ತನಿಖೆಯಾಗಬೇಕೆಂದು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ, ಮತ್ತು ಅಲ್ಲಿರತಕ್ಕಂಥ ಜನರಿಗೆ ಸಂಪೂರ್ಣವಾದ ರಕ್ಷಣೆಯನ್ನು ಕೊಡಬೇಕು. ಅದರಲ್ಲಿರುವ ವಿರೋಧಿಪಕ್ಷದ ಜನರಿಗೆ ಯಾವುದೇ ವಿಧವಾದ ಸಂರಕ್ಷಣೆಯಿಲ್ಲ. ಭಯದ ವಾತಾವರಣ ನಿರ್ಮಾಣವಾಗಿದೆ. ಅಲ್ಲಿಯ ಪಕ್ಷದ ಮುಖಂಡರು ಏನು ಹೇಳುತ್ತಾರೆ, ಅದನ್ನೇ ಕೇಳಬೇಕು. ಉಳಿದವರು ಮಾತ್ರ ಮರ್ಡರ್ ಆದಹಾಗೆಂದು ತಿಳಿದುಕೊಳ್ಳಬೇಕು. ಆ ಪರಿಸ್ಥಿತಿ ಇದೆ. ಇದರ ಬಗ್ಗೆ ತಾವು ಸಮಗ್ರ ತನಿಖೆ ಮಾಡಬೇಕು, ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ ಅಫ್ಜಲ್‌ಪುರ ತಾಲ್ಲೂಕಿನಲ್ಲಿ ನಡೆದಂಥ ಕೆಲವು ಘಟನೆಗಳ ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ತಾವು 6-7 ವರ್ಷಗಳ ವಿಚಾರ ಕೇಳಿದ್ದೀರಿ. ಮರ್ಡರ್ ಆಗುತ್ತಿದೆ 6-7 ವರ್ಷಗಳಿಂದ, ಆದರೆ ಬರಿ 20-2-93 ರಂದು ಮಧ್ಯಾಹ್ನ ಏನು ಘಟನೆ ಆಯಿತು, ಒಂದು ಕೊಲೆ ನಡೆಯಿತು ಇದರ ಬಗ್ಗೆ ಉತ್ತರ ಕೊಡಬಹುದು.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಗಳೇ, 1992ನೇ ಇಸವಿಯಲ್ಲಿ ಮೂರು ಜನ ಪರಿಶಿಷ್ಟ ಜಾತಿಯವರು ಮರ್ಡರ್ ಆಗಿರುವುದಕ್ಕೆ ಫ್ಯಾಕ್ಟ್ಸ್ ಇದೆ. ಅಲ್ಲಿಂದ ಎಂ.ಎಲ್.ಎ. ಕ್ಯಾಂಡಿಡೇಟ್ ಮರ್ಡರ್ ಆಗಿರುವುದಕ್ಕೆ ಫ್ಯಾಕ್ಟ್ಸ್ ಇದೆ. ಅದಕ್ಕಿಂತ ಮುಂಚೆ ಜಿಲ್ಲಾ ಕ್ಯಾಂಡಿಡೇಟ್ ಮರ್ಡರ್ ಆದುದಕ್ಕೆ ಫ್ಯಾಕ್ಟ್ಸ್ ಇದೆ. ಇದಕ್ಕೆಲ್ಲಾ ಈ ನಾಲ್ಕು ಜನರೇ ಕಾರಣರು. ಆದ್ದರಿಂದ ಸಮಗ್ರ ತನಿಖೆ ಮಾಡಿದರೆ 5-6 ವರ್ಷಗಳಿಂದ ಏತಕ್ಕೆ ಈ ರೀತಿ ನಡೆಯುತ್ತಿದೆ ಎನ್ನುವುದಕ್ಕೆ ಸತ್ಯ ಹೊರಗೆ ಬರುತ್ತದೆ. ನಾನು ಆ ಬಗ್ಗೆ ಪ್ರಶ್ನೆ ಕೇಳುತ್ತಿದ್ದೇನೆ. ಮರ್ಡರ್ ಆಗಿದೆ, ಮರ್ಡರ್ ಆಗಿರುವುದಕ್ಕೆ ಫ್ಯಾಕ್ಟ್ಸ್ ಇದೆ. ಅದನ್ನು ನಿಮಗೂ ಡಿನೈ

ಮಾಡುವುದಕ್ಕಾಗುವುದಿಲ್ಲ, ನನಗೂ ಡಿನ್ಯೇ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಅಧಿಕಾರಿಗಳು ಡಿನ್ಯೇ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಯಾರನ್ನು ಅರೆಸ್ಟ್ ಮಾಡಿಲ್ಲ. ಯಾರೋ ಜನರನ್ನು ತರುವುದು, ಅವರಿಗೆ 10-20 ಸಾವಿರ ಹಣವನ್ನು ಕೊಡುವುದು ಮತ್ತೆ ಒಪ್ಪಿಸುವುದು ಮನೆಗೆ ಕಳುಹಿಸುವುದು. 2 ವರ್ಷ 3 ವರ್ಷ ಜೈಲಿಗೆ ಕಳುಹಿಸುವುದು, ಹಾಗಾಗಿ ಇದರ ಬಗ್ಗೆ ಒಂದು ಸಮಗ್ರವಾದ ತನಿಖೆಯನ್ನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಆಂದರೆ ಸತ್ಯ ಹೊರಗೆ ಬರುತ್ತದೆ. ಯಾರು ಜವಾಬ್ದಾರರಿರುತ್ತಾರೆ ಅವರ ವರ್ತನೆಯ ಬಗ್ಗೆ ಒಂದು ಭಯದ ವಾತಾವರಣ ನಿರ್ಮಾಣವಾಗುತ್ತದೆ. ಇಲ್ಲವೆಂದರೆ ನಿಮ್ಮ ಕಾನೂನು ವ್ಯವಸ್ಥೆಯ ಬಗ್ಗೆ ಯಾರಿಗೂ ಭಯವಿರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಈಗ ಸಮಗ್ರ ತನಿಖೆಯ ಬಗ್ಗೆ ಕೇಳುತ್ತಿದ್ದೀರಿ. ಬರಿ 20-2-93ರ ಇದರ ಬಗ್ಗೆ ಸೀಮಿತವಾಗಿದ್ದರೆ ನಾನು ಉತ್ತರ ಕೊಡಬಹುದು. ಆದರೆ ಸಮಗ್ರ ತನಿಖೆಯಾಗಬೇಕೆಂದು ತಾವು ಕೇಳಿಕೊಂಡಿದ್ದೀರಿ ಅದಕ್ಕೆ 12 ಗಂಟೆಗೆ ನಾನು ತಮಗೆ ಉತ್ತರ ಕೊಡುತ್ತೇನೆ.

(4) ನಾಗಮಂಗಲ ತಾಲ್ಲೂಕಿನ ಬೊನಾಳೆ ಕಾಲುವೆಗೆ ಸ್ವಾಧೀನಪಡಿಸಿಕೊಂಡ ರೈತರ ಭೂಮಿಗೆ ಪರಿಹಾರ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:-ಸನ್ಮಾನ್ಯ ಅಧ್ಯಕ್ಷರೇ, ಮದ್ದೂರ್ ಮತ್ತು ನಾಗಮಂಗಲ ತಾಲ್ಲೂಕಿನಲ್ಲಿ ತೋಡಲಾದಂಥ ಬೊನಾಳೆ ಕಾಲುವೆ ಎಡದಂಡೆ ಮತ್ತು ಬಲದಂಡೆ ಕಾಲುವೆಗೆ ಸ್ವಾಧೀನಪಡಿಸಿಕೊಂಡಂಥ 8 ಗ್ರಾಮಗಳ ರೈತರ ಭೂಮಿಗೆ 18 ವರ್ಷದಿಂದ ಪರಿಹಾರ ಕೊಟ್ಟಿಲ್ಲ. ರೈತರು ಪರಿಹಾರಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಿದರೂ, ಸಿಕ್ಕಿಲ್ಲ. ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಅಹವಾಲು ಕೊಟ್ಟಿದ್ದಾರೆ, ತೀವ್ರಗತಿಯಿಂದ ನಾವು ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥ ಉತ್ತರವನ್ನು ಸಹ ಕೊಟ್ಟಿದ್ದಾರೆ. ಮತ್ತೆ ಒಂದು ವರ್ಷ ಕಳೆಯಿತು ಇನ್ನುತನಕ ಪರಿಹಾರ ಸಿಕ್ಕಿಲ್ಲ. ಆ ಕಾರಣ ತೀವ್ರ ಪರಿಹಾರವನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ವರದಿಯನ್ನು ತರಿಸಿ ನಾವು ಪರಿಶೀಲನೆ ಮಾಡುತ್ತೇವೆ.

(5) ಸಾಗರ ತಾಲ್ಲೂಕು ಕುರುವಳ್ಳಿ ಗ್ರಾಮದ ಶ್ರೀಮತಿ ಪ್ರೇಮ ಎನ್ನುವವರ ಕೊಲೆ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ತಮ್ಮ ಗಮನವನ್ನು ಸೆಳೆಯಲಿಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ನೋವಿನ ಸಂಗತಿ ಎಂದರೆ ಶ್ರೀಮತಿ ಪ್ರೇಮ, ಕುರುವಳ್ಳಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಇಲ್ಲಿ ಇವಳನ್ನು ಅಮಾನುಷವಾಗಿ ಕೊಲೆ ಮಾಡಿರುವ ಒಂದು ಪ್ರಸಂಗ ಬೆಳಕಿಗೆ ಬಂದಿದೆ. ನಾವು ಅಲ್ಪಸ್ವಲ್ಪ ಇಲ್ಲಿ ಕುಳಿತಿರುವ ಮಹಿಳಾ ಶಾಸಕರು ಹೆಣ್ಣುಮಕ್ಕಳಿಗೆ ಆಗುತ್ತಿರುವ ಅನ್ಯಾಯವನ್ನು ಬೆಳಕಿಗೆ ತರುತ್ತಿದ್ದೇವೆನ್ನುವ ವಿಶ್ವಾಸದಿಂದ ನಮಗೆ ಈಗ ಇಂಥ ಪ್ರಕರಣಗಳ ಬಗ್ಗೆ ಮಾಹಿತಿ ಒದಗಿ ನಾವು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶವಾಗುತ್ತಿದೆ. ಈ ಪ್ರೇಮಳ ಕೊಲೆಗೆ ಕಾರಣರು ಯಾರು? ಯಾವ ಕಾರಣಕ್ಕಾಗಿ ಈ ಹೆಣ್ಣು ಮಗಳನ್ನು ಕೊಲೆ ಮಾಡಿದರು ಇದರ ಬಗ್ಗೆ ಇನ್ನೂ ತನಿಖೆ ಏತಕ್ಕೆ ಆಗಲಿಲ್ಲ ಮತ್ತು ಸಂಬಂಧಪಟ್ಟವರಿಗೆ ಏತಕ್ಕೆ ಶಿಕ್ಷೆಯಾಗಲಿಲ್ಲವೆನ್ನುವುದನ್ನು ನಾನು ಪ್ರಶ್ನೆ ಮಾಡುತ್ತಾ ಕೂಡಲೇ ಶಿವಮೊಗ್ಗ ಡಿಸ್ಟ್ರಿಕ್ಟ್ ತುರುವಳ್ಳಿ, ಸಾಗರ ತಾಲ್ಲೂಕು, ಅಲ್ಲಿ ಕೂಡಲೇ ಎಂಥ ವ್ಯಕ್ತಿಯಾಗಿದ್ದರೂ ಎಂಥ ಪ್ರಭಾವಿಯುತ ವ್ಯಕ್ತಿಯಾಗಿದ್ದರೂ ಅವರನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು.

ಪುನಃ ಎಲ್ಲಿಯೂ ಸಮಾಜದಲ್ಲಿ ಮಹಿಳೆಯರ ಸಾವಾಗಲಿ, ಅತ್ಯಾಚಾರ ಪ್ರಕರಣವಾಗಲಿ ಮರುಕಳಿಸಬಾರದು. ಮೊನ್ನೆ ದಿವಸ ಹೆಣ್ಣು ಮಕ್ಕಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ; ಹಾನಗಲ್‌ನಲ್ಲಿ